(ಇಂದು ದಿನಾಂಕ:13-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರ .ಂ. 2 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ಅಪಘಾತದ ಸಮಯದಲ್ಲಿ ನನ್ನ ಗಂಡ ಮೃತ ನಾಗಪ್ಪ ಇವರಿಗೆ 56 ವರ್ಷ ವಯಸ್ಸು ಇತ್ತು ಎಂದರೆ ಸರಿ. ಪಿರ್ಯಾದಿಯನ್ನು ನಾನೇ ಕೊಟ್ಟಿರುತ್ತೇನೆ. ಪಿರ್ಯಾದಿಯಲ್ಲಿ ಆರೋಪಿ ಹೆಸರು ಬರೆಸಿರುವುದಿಲ್ಲ ಎಂದರೆ ಸರಿ. ಅಪಘಾತಪಡಿಸಿದ ಆರೋಪಿ ಹೆಸರು ವೆಂಕೋಬಾ ಎನ್ನುವವರು ಹೇಳಿರುತ್ತಾರೆ. ನಾನು ಮತ್ತು ಪೋಲೀಸರ ಜೊತೆ ಶಾಮಿಲಾಗಿ ವೆಂಕೋಬಾ ಇವರ ಹೆಸರನ್ನು ಪರಿಹಾರಕ್ಕಾಗಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಗಂಡನೇ ದುಡಿಯುತ್ತಿದ್ದನು. ಅಪಘಾತವು ನನ್ನ ಗಂಡ ಮೃತ ನಾಗಪ್ಪ ಇವರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅರ್ಜಿಯು ಕಾಲಮಿತಿಯಲ್ಲಿ ಹಾಕದ ಕಾರಣ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ನಾಗಪ್ಪ ತಿಂಗಳಿಗೆ ರೂ. 15,000/- ದುಡಿಯುತ್ತಿದ್ದನು. ನಮ್ಮದು ಜಮೀನು ಇರುವುದಿಲ್ಲ. ನನ್ನ ಗಂಡ ಮೃತ ನಾಗಪ್ಪ ವರ್ಷಕ್ಕೆ 5 ಲಕ್ಷ ದುಡಿಯುತ್ತಿದ್ದನು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ಹಾಕಿರುವುದಿಲ್ಲ ಎಂದರೆ ಸರಿ. ನನಗೆ ಒಬ್ಬಳೇ ಮಗಳು, ಅವಳು ಇನ್ನೂ ವಿದ್ಯಾಭ್ಯಾಸ ಮಾಡುತ್ತಿರುತ್ತಾಳೆ.

2. ಎದುರುದಾರರ ನಂ.1 ಇವರಿಗೆ ಸೂಕ್ತವಾದ ಚಾಲನಾ ಪತ್ರ ಮತ್ತು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು